# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

## ಸಿ. ಸಿ. ನಂ.32/2021

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಸುನೀಲ | ಸಿಡಬ್ಲ್ಯೂ-5 | ಪಿಡಬ್ಲ್ಯೂ-3 |
| ತಂದೆಯ/ಗಂಡನ ಹೆಸರು | ರುದ್ರಪ್ಪ ದೊಡಮನಿ | | |
| ವಯಸ್ಸು | 50 ವರ್ಷ | | |
| ಉದ್ಯೋಗ | ಟೇಲರ | | |
| ವಾಸ ಸ್ಥಳ | ಭೂತಪುರ | | |

ದಿನಾಂಕ 25-11-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಈಗ ತೋರಿಸುತ್ತಿರುವ ದಾಖಲೆ ಮೇಲಿರುವ ಸಹಿ ನನ್ನದೆ ಇರುತ್ತದೆ. ಸಾಕ್ಷಿ ತಮ್ಮ ಸಹಿ ಗುರುತಿಸಿದ ದಾಖಲೆ ಗುನ್ನೆ ಸ್ಥಳದ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಏನು ಬರೆಯಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಪಂಚನಾಮೆ ಮಾಡಿಲ್ಲ. ಈಗ ತೋರಿಸುತ್ತಿರುವ ನಿಪಿ-4 ಪೋಟೋದಲ್ಲಿ ನಾನು ಕಾಣಿಸುತ್ತೇನೆ. ಸದರಿ ಪೊಟೋವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿಃ 11.08.2020 ರಂದು ಮುಂಜಾನೆ 09.00 ಗಂಟೆಗೆ ಸುರವಾರ ಗ್ರಾಮ ದಾಟಿ ವಿಭಾಕರ ಪಾಟೀಲ ಇವರ ಹೊಲದ ಹತ್ತಿರ ಒಂದು ಅಪಘಾತವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆಗ ಪೊಲೀಸರು ಪಂಚನಾಮೆಗೆಂದು ನನ್ನನ್ನು ಕರೆಯಿಸಿ ಮುಂಜಾನೆ 10.00 ಗಂಟೆಯವರೆಗೆ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಒಂದು ಮೋಟಾರ ಸೈಕಲ್ ನಂ.KA-39 J-5494 ನ್ನೆದ್ದನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಪಂಚನಾಮೆಯಲ್ಲಿ ಭಾಗವಹಿಸಿದ್ದರೂ ಆರೋಪಿಗೆ ಸಹಾಯಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ .ನ್ಯಾ ದಂ. ಸೇಡಂ.

*SYH*

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

## ಸಿ. ಸಿ. ನಂ.32/2021

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಮಹಾನಂದ | ಸಿಡಬ್ಲ್ಯೂ-8 | ಪಿಡಬ್ಲ್ಯೂ-4 |
| ತಂದೆಯ/ಗಂಡನ ಹೆಸರು | ಸಿದ್ದಣ್ಣ ಕಂದಗೋಳ | | |
| ವಯಸ್ಸು | 46 ವರ್ಷ | | |
| ಉದ್ಯೋಗ | ಮನೆಗೆಲಸ | | |
| ವಾಸ ಸ್ಥಳ | ಭೂತಪುರ ಗ್ರಾಮ | | |

ದಿನಾಂಕ 25-11-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಂದ್ರಶೇಖರ ನನ್ನ ಮೈದುನ ಇರುತ್ತಾರೆ. ಮೃತ ಪೂಜಾ ಇವಳು ನನ್ನ ಮಗಳು ಇರುತ್ತಾಳೆ. ಈಗ 2020 ನೇ ಇಸವಿಯಲ್ಲಿ ನನ್ನ ಮಗಳು ಪೂಜಾ ಚಂದ್ರಶೇಖರ ಇವರೊಂದಿಗೆ ಬಟ್ಟೆ ತರಲು ಹೋಗಿದ್ದು ಇತ್ತು. ನಂತರ ಸಾಯಂಕಾಲ ಸದರಿ ವೀರಕುಮಾರ ಇತನು ನನಗೆ ಪೋನ ಮಾಡಿ ಚಿಂಚೊಳ್ಳಿ ರೋಡಿನ ಹತ್ತಿರ ಮೋಟಾರ ಸೈಕಲಗೆ ಅಪಘಾತವಾಗಿರುವುದಾಗಿ ಹೇಳಿರುತ್ತಾರೆ. ಆಗ ನಾನು ಸೇಡಂ ಸರಕಾರಿ ಆಸ್ಪತ್ರೆಗೆ ಹೋಗಿ ನೋಡಿದ್ದು ಸದರಿ ಚಂದ್ರಶೇಖರ ಮತ್ತು ನನ್ನ ಮಗಳು ಪೂಜಾ ಇವಳನ್ನು ಕಲಬುರಗಿಯ ಯುನೈಟೆಡ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಾಗಿ ಗೊತ್ತಾಗಿ ಅಲ್ಲಿಗೆ ಹೋಗಿ ಅವರನ್ನು ನೋಡಿರುತ್ತೇನೆ. ನನ್ನ ಮಗಳಿಗೆ ತಲೆಗೆ ಪೆಟ್ಟಾಗಿತ್ತು. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಂತರದಲ್ಲಿ ದಿನಾಂಕ 15.08.2020 ರಂದು ನನ್ನ ಮಗಳು ವೈದ್ಯಕೀಯ ಉಪಚಾರ ಫಲಿಸದೇ ಮೃತಪಟ್ಟಿರುತ್ತಾಳೆ. ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. ಮರು ಹೇಳಿಕೆ ನೀಡಿಲ್ಲ. ಆರೋಪಿಯನ್ನು ಗುರುತಿಸುತ್ತೇನೆ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 09.08.2020 ರಂದು ಬೆಳಗ್ಗೆ 11.00 ಗಂಟೆ ಸುಮಾರಿಗೆ ಆರೋಪಿ ತನ್ನ ಮೊಟಾರ ಸೈಕಲ ನಂ.KA-39 J-5494 ನೆದ್ದರ ಮೇಲೆ ನಮ್ಮ ಮನೆಗೆ ಬಂದಿದ್ದರು ಮತ್ತು

ಮದ್ಯಾಹ್ನ 03.30 ಗಂಟೆಗೆ ಮಕ್ಕಳಿಗೆ ಬಟ್ಟೆ ತರುವ ಸಲುವಾಗಿ ಸೇಡಂ ಪಟ್ಟಣಕ್ಕೆ ದ್ವಿಚಕ್ರ ವಾಹನದ ಮೇಲೆ ನನ್ನ ಮಗಳನ್ನು ಕೊಡ್ರಿಸಿಕೊಂಡು ಹೋಗಿದ್ದರು ಎಂದರೆ ಸರಿ. ನಂತರ ಸಾಯಂಕಾಲ 07.30 ಗಂಟೆಗೆ ಆರೋಪಿಯೇ ನನಗೆ ಪೋನ ಮಾಡಿ ಸೇಡಂದಿಂದ ಮರಳಿ ಬರುತ್ತಿರುವಾಗ ಸೇಡಂ–ಚಿಂಚೊಳ್ಳಿ ರೋಡಿ ಮೇಲೆ ಹೊರಟಾಗ ಸುರವಾರ ಗ್ರಾಮ ದಾಟಿ ರೋಡಿನ ಎಡಬದಿಗೆ ಮೋಟಾರ ಸೈಕಲ ನಿಯಂತ್ರಣ ತಪ್ಪಿ ಸ್ಕಿಡಾಗಿ ಮೋಟಾರ ಸೈಕಲ ಮೇಲಿಂದ ಬಿದ್ದಿರುವುದಾಗಿ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಸ್ಕಿಡಾಗಿ ಬಿದಿದ್ದರಿಂದ ಪೂಜಾ ಇವಳಿಗೆ ತಲೆಯ ಎದುರುಗಡೆ ಬಲಗಣ್ಣಿಗೆ ಭಾರಿ ರಕ್ತಗಾಯಗಳಾಗಿದ್ದವು ಸಹ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಕುರಿತು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಮತ್ತು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ–5 ಎಂದು ಗುರುತಿಸಲಾಯಿತು. ನಿಪಿ–5 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಶಿಕ್ಷೆಯಾಗಬಾರದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ.ಸರಿ ಇದೆ.

ಸಹಿ/-

ಪ್ರ. ದ .ನ್ಯಾ ದಂ. ಸೇಡಂ.

*SYH

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

## ಸಿ. ಸಿ. ನಂ.32/2021

| | | | |
|---|---|---|---|
| ಹೆಸರು ಕುಮಾರಿ | ಸುಧಾರಾಣಿ | ಸಿಡಬ್ಲ್ಯೂ-9 | ಪಿಡಬ್ಲ್ಯೂ-5 |
| ತಂದೆಯ/ಗಂಡನ ಹೆಸರು | ಸಿದ್ದಣ್ಣ ಕಂದಗೋಳ | | |
| ವಯಸ್ಸು | 18 ವರ್ಷ | | |
| ಉದ್ಯೋಗ | ವಿದ್ಯಾರ್ಥಿನಿ | | |
| ವಾಸ ಸ್ಥಳ | ಭೂತಪುರ ಗ್ರಾಮ | | |

ದಿನಾಂಕ 25-11-2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಂದ್ರಶೇಖರ ನನ್ನ ಚಿಕ್ಕಪ್ಪ ಇರುತ್ತಾರೆ. ಮೃತ ಪೂಜಾ ಇವಳು ನನ್ನ ಅಕ್ಕ ಇರುತ್ತಾಳೆ. ಈಗ 2020 ನೇ ಇಸವಿಯಲ್ಲಿ ನನ್ನ ಅಕ್ಕ ಪೂಜಾ ಚಂದ್ರಶೇಖರ ಇವರೊಂದಿಗೆ ಬಟ್ಟೆ ತರಲು ಹೋಗಿದ್ದು ಇತ್ತು. ನಂತರ ಸಾಯಂಕಾಲ ಸದರಿ ವೀರಕುಮಾರ ಇತನು ನಮಗೆ ಪೋನ ಮಾಡಿ ಚಿಂಚೊಳ್ಳಿ ರೋಡಿನ ಹತ್ತಿರ ಮೋಟಾರ ಸೈಕಲಗೆ ಅಪಘಾತವಾಗಿರುವುದಾಗಿ ಹೇಳಿರುತ್ತಾರೆ. ಆಗ ನಾನು ಸೇಡಂ ಸರಕಾರಿ ಆಸ್ಪತ್ರೆಗೆ ಹೋಗಿ ನೋಡಿದ್ದು ಸದರಿ ಚಂದ್ರಶೇಖರ ಮತ್ತು ನನ್ನ ಅಕ್ಕ ಪೂಜಾ ಇವಳನ್ನು ಕಲಬುರಗಿಯ ಯುನೈಟೆಡ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಾಗಿ ಗೊತ್ತಾಗಿ ಅಲ್ಲಿಗೆ ಹೋಗಿ ಅವರನ್ನು ನೋಡಿರುತ್ತೇನೆ. ನನ್ನ ಅಕ್ಕನಿಗೆ ತಲೆಗೆ ಪೆಟ್ಟಾಗಿತ್ತು. ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಂತರದಲ್ಲಿ ದಿನಾಂಕ 15.08.2020 ರಂದು ನನ್ನ ಅಕ್ಕ ವೈದ್ಯಕೀಯ ಉಪಚಾರ ಫಲಿಸದೇ ಮೃತಪಟ್ಟಿರುತ್ತಾಳೆ. ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. ಮರು ಹೇಳಿಕೆ ನೀಡಿಲ್ಲ. ಆರೋಪಿಯನ್ನು ಗುರುತಿಸುತ್ತೇನೆ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 09.08.2020 ರಂದು ಬೆಳಗ್ಗೆ 11.00 ಗಂಟೆ ಸುಮಾರಿಗೆ ಆರೋಪಿ ತನ್ನ ಮೊಟಾರ ಸೈಕಲ ನಂ.KA-39 J-5494 ನೆದ್ದರ ಮೇಲೆ ನಮ್ಮ ಮನೆಗೆ ಬಂದಿದ್ದರು ಮತ್ತು ಮದ್ಯಾಹ್ನ 03.30 ಗಂಟೆಗೆ ಮಕ್ಕಳಿಗೆ ಬಟ್ಟೆ ತರುವ ಸಲುವಾಗಿ ಸೇಡಂ ಪಟ್ಟಣಕ್ಕೆ ದ್ವಿಚಕ್ರ ವಾಹನದ

ಮೇಲೆ ನನ್ನ ಅಕ್ಕನನ್ನು ಕೂಡ್ರಿಸಿಕೊಂಡು ಹೋಗಿದ್ದರು ಎಂದರೆ ಸರಿ. ನಂತರ ಸಾಯಂಕಾಲ 07.30 ಗಂಟೆಗೆ ಆರೋಪಿಯೇ ನಮಗೆ ಪೋನ ಮಾಡಿ ಸೇಡಂದಿಂದ ಮರಳಿ ಬರುತ್ತಿರುವಾಗ ಸೇಡಂ–ಚಿಂಚೋಳ್ಳಿ ರೋಡಿ ಮೇಲೆ ಹೊರಟಾಗ ಸುರವಾರ ಗ್ರಾಮ ದಾಟಿ ರೋಡಿನ ಎಡಬದಿಗೆ ಮೋಟಾರ ಸೈಕಲ ನಿಯಂತ್ರಣ ತಪ್ಪಿ ಸ್ಕಿಡಾಗಿ ಮೋಟಾರ ಸೈಕಲ ಮೇಲಿಂದ ಬಿದ್ದಿರುವುದಾಗಿ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಸ್ಕಿಡಾಗಿ ಬಿದಿದ್ದರಿಂದ ಪೂಜಾ ಇವಳಿಗೆ ತಲೆಯ ಎದುರುಗಡೆ ಬಲಗಣ್ಣಿಗೆ ಭಾರಿ ರಕ್ತಗಾಯಗಳಾಗಿದ್ದವು ಸಹ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಅಪಘಾತ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಕುರಿತು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಮತ್ತು ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ–6 ಎಂದು ಗುರುತಿಸಲಾಯಿತು. ನಿಪಿ–6 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಶಿಕ್ಷೆಯಾಗಬಾರದೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ.ಸರಿ ಇದೆ.

ಸಹಿ/-

ಪ್ರ. ದ .ನ್ಯಾ ದಂ. ಸೇಡಂ.

*SYH